**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಮೇಶ್ ಬಾಬು ಇವರ ನಿಯಮ 72 ರ ಮೇರೆಗೆ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಪ್ರಶ್ನೆ:**

ಪ್ರತಿ ಬಡವರಿಗೆ ಸೂರು ಕೊಡುವ ಉದ್ದೇಶದಿಂದ ಕರ್ನಾಟಕ ರಾಜ್ಯ ಸರ್ಕಾರವು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ಸಾರ್ವಜನಿಕ ಉದ್ದಿಮೆಯನ್ನು ಸ್ಥಾಪನೆ ಮಾಡಿರುತ್ತದೆ. ಕೆಳವರ್ಗದವರಿಗೆ ಮತ್ತು ಶೋಷಿತ ಸಮುದಾಯಗಳಿಗೆ ಸರ್ಕಾರದ ಯೋಜನೆಗಳ ಮೂಲಕ ವಸತಿ ಕಲ್ಪಿಸುವುದು ಇದರ ಉದ್ದೇಶವಾಗಿದ್ದು, ಹಲವಾರು ಯೋಜನೆಗಳ ಮೂಲಕ ಫಲಾನುಭವಿಗಳಿಗೆ ಮಾನದಂಡಗಳಿಗೆ ಅನುಗುಣವಾಗಿ ವಸತಿ ಸೌಕರ್ಯ ಕಲ್ಪಿಸಲಾಗುತ್ತಿದೆ. ರಾಜೀವ್ ಗಾಂಧಿ ವಸತಿ ನಿಗಮವು ಕಳೆದ 3 ವರ್ಷಗಳಲ್ಲಿ ನೂರಾರು ಕೋಟಿ ರೂಪಾಯಿಗಳ ಅನುದಾನ ಬಿಡುಗಡೆಯ ಸಂದರ್ಭದಲ್ಲಿ, ಅನುದಾನ ಬಳಕೆಯ ಸಂದರ್ಭದಲ್ಲಿ, ಸೆಕ್ಷನ್ 4(ಜಿ) ಅನುಮತಿಯನ್ನು ದುರುಪಯೋಗ ಪಡಿಸಿಕೊಂಡು ಕಳಪೆ ಕಾಮಗಾರಿಗಳಿಗೆ ಕೋಟ್ಯಾಂತರ ರೂಪಾಯಿ ಹಣ ಬಿಡುಗಡೆ ಮಾಡಲಾಗಿದೆ. ವಸತಿ ಯೋಜನೆಯನ್ನು ಅನುಷ್ಠಾನಗೊಳಿಸದೆ ಅನುದಾನ ಬಳಸಿಕೊಂಡಿರುವ ಮತ್ತು ಕಾಮಗಾರಿಗಳಿಗೆ ನಿಯಮಬಾಹಿರವಾಗಿ ಹಣ ಬಿಡುಗಡೆ ಮಾಡಿರುವ ಆರೋಪವು ವ್ಯವಸ್ಥಾಪಕರು ಹಾಗೂ ಇನ್ನಿತರ ಅಧಿಕಾರಿಗಳ ಮೇಲೆ ಆರೋಪಗಳಿರುತ್ತದೆ. ಮಾನ್ಯ ಸಚಿವರು ಸಾರ್ವಜನಿಕ ಹಿತದೃಷ್ಟಿಯಿಂದ ರಾಜೀವ್ ಗಾಂಧಿ ವಸತಿ ನಿಗಮದ ಅನುದಾನಗಳ ಬಿಡುಗಡೆ, ಬಳಕೆ ಹಾಗೂ ಕಾನೂನುಬಾಹಿರ ಕಾಮಗಾರಿಗಳ ಆರೋಪದ ಮೇಲೆ ಮತ್ತು ಶಾಮೀಲಾಗಿರುವ ಅಧಿಕಾರಿಗಳ ಮೇಲೆ ತನಿಖೆ ಮಾಡಿ ಕ್ರಮ ಕೈಗೊಳ್ಳುವ ಕುರಿತು ಮಾನ್ಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಉತ್ತರ:**

ಸರ್ಕಾರವು ರಾಜೀವ್ ಗಾಂಧಿ ವಸತಿ ನಿಗಮವನ್ನು (ಸಾರ್ವಜನಿಕ ಉದ್ದಿಮೆ) ಗ್ರಾಮೀಣ ಮತ್ತು ನಗರ ಪ್ರದೇಶಗಳ ಅರ್ಹ ಫಲಾನುಭವಿಗಳಿಗೆ ಸೂರು ಒದಗಿಸುವ ಉದ್ದೇಶವನ್ನು 2000 ನೇ ಸಾಲಿನಲ್ಲಿ ಸ್ಥಾಪಿಸಲಾಗಿರುತ್ತದೆ. ನಿಗಮದಿಂದ ಕೆಳವರ್ಗದ ಎಲ್ಲಾ ಶೋಷಿತ ಸಮುದಾಯಗಳಿಗೆ ಸರ್ಕಾರದ ಯೋಜನೆಗಳ ಮೂಲಕ ವಸತಿ ಕಲ್ಪಿಸುವುದು ಇದರ ಉದ್ದೇಶವಾಗಿರುತ್ತದೆ.

ರಾಜ್ಯದಲ್ಲಿ ರಾಜೀವ್ ಗಾಂಧಿ ವಸತಿ ನಿಗಮದಿಂದ ವಸತಿ ಯೋಜನೆಗಳಾದ ಬಸವ ವಸತಿ ಯೋಜನೆ, ಡಾ. ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ, ದೇವರಾಜು ಅರಸು ವಸತಿ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆ, ಪ್ರಧಾನ ಮಂತ್ರಿ ಆವಾಸ್ ಯೋಜನೆಗಳು ಅನುಷ್ಠಾನಗೊಳಿಸಲಾಗುತ್ತಿದ್ದು, ಯೋಜನೆಗಳ ಫಲಾನುಭವಿಗಳಿಗೆ ಹಂತವಾರು ಮನೆಗಳ ಪ್ರಗತಿಗನುಗುಣವಾಗಿ ಪ್ರಗತಿಯ ಛಾಯಾಚಿತ್ರದ ಆಧಾರದ ಮೇಲೆ ಫಲಾನುಭವಿಯ ಬ್ಯಾಂಕ್ ಖಾತೆಗೆ ನೇರವಾಗಿ ಡಿಬಿಡಿ ಮುಖಾಂತರ ಅನುದಾನ ವರ್ಗಾವಣೆ ಮಾಡಲಾಗುತ್ತಿದೆ.

ಮುಂದುವರೆದು, ರಾಜೀವ್ ಗಾಂಧಿ ವಸತಿ ನಿಗಮದಿಂದ ಸೆಕ್ಷನ್ 4(ಜಿ)ರಡಿ ಕಳೆದ ಮೂರು ವರ್ಷಗಳಿಂದ ಮೂಲಭೂತ ಸೌಕರ್ಯ ಕಾಮಗಾರಿಗಳು ಹಾಗೂ ವಿವಿಧ ಇಲಾಖೆಗಳಿಂದ ಕಾಲೋನಿ ಅಭಿವೃದ್ಧಿ, ಕಟ್ಟಡ ಕಾಮಗಾರಿಗಳಿಗೆ (ಸಿವಿಲ್ ಕಾಮಗಾರಿಗಳು) ಕರ್ನಾಟಕ ರಾಜ್ಯ ಹ್ಯಾಬಿಟೇಟ್ ಸಂಸ್ಥೆ ರವರಿಗೆ 4(ಜಿ) ವಿನಾಯಿತಿಯಡಿ ಕಾರ್ಯದೇಶ ನೀಡಲಾಗಿರುತ್ತದೆ.

Scanned with OKEN Scanner

ಮುಂದುವರೆದು, ವಸತಿ ಯೋಜನೆಯಡಿ ಸದರಿ ಸಂಸ್ಥೆಗೆ ಸೆಕ್ಷನ್ 4(ಜಿ) ರಡಿ ಅನುಮತಿ ಪಡೆದು ಯಾವುದೇ ಕಾಮಗಾರಿಗಳನ್ನು ನೀಡಿರುವುದಿಲ್ಲ.

ಸದರಿ ಸಂಸ್ಥೆಯು ನಿರ್ವಹಿಸುತ್ತಿರುವ ಮೂಲಭೂತ ಸೌಕರ್ಯ ಹಾಗೂ ಇತರೆ ಕಾಮಗಾರಿಗಳಿಗೆ ತೃತೀಯ ತಾಂತ್ರಿಕ ತಜ್ಞರಿಂದ ಕಾಮಗಾರಿಯ ಗುಣಮಟ್ಟದ ವರದಿಯನ್ನು ಪಡೆದು ಸದರಿ ವರದಿಯನ್ವಯ ಕರಾರು ಒಪ್ಪಂದದ ಪ್ರಕಾರ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಅದರನ್ವಯ, ಸದರಿ ಕಾಮಗಾರಿಗಳಿಗೆ ಯಾವುದೇ ದೂರು ಬಂದಿರುವುದಿಲ್ಲ ಹಾಗೂ ಅವ್ಯವಹಾರ ನಡೆದಿರುವುದಿಲ್ಲ.

(ಬಿ.ಜೆಡ್. ಜಮೀರ್ ಅಹ್ಮದ್‌ಖಾನ್)

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ

ಕಲ್ಯಾಣ ಸಚಿವರು

ಸಂಖ್ಯೆ: ವಇ 525 ಹೆಚ್‌ಎಎಂ 2025

Scanned with OKEN Scanner